# ಅವರು ನೊಂದರೆ ಎನಗೆ ಸುಖವಯ್ಯಾ...

ಸಿನಿಮಾ ನಿರ್ದೇಶಕರೊಬ್ಬರು ಆತ್ಮಹತ್ಯೆಗೆ ಪ್ರಯತ್ನಿಸಿದರು. ಮತ್ತೊಬ್ಬ ನಿರ್ಮಾಪಕ/ನಿರ್ದೇಶಕ 'ಸಿನಿಮಾ ನಿರ್ಮಿಸಿದ್ದೇ ಒಂದು ಆತ್ಮಹತ್ಯಾ ಪ್ರಯತ್ನ' ಎಂದು ನೊಂದುಕೊಂಡು, ತಮ್ಮ ಸಿನಿಮಾವನ್ನು ಚಿತ್ರಮಂದಿರಗಳಿಂದ ವಾಪಸ್ ಪಡೆದು 'ಸಾರಿ' ಎಂದರು. ಇವೆಲ್ಲ ಕನ್ನಡ ಚಿತ್ರರಂಗದ ಇತ್ತೀಚಿನ ಚಿತ್ರಗಳು. ಸಿನಿಮಾದ ಈ ಕೊಂದುಕೊಳ್ಳುವ ಪ್ರಸಂಗಗಳು ಕೊಂಚ ಬೇರೆ ರೂಪದಲ್ಲಿ ಸಾಹಿತ್ಯಕ್ಷೇತ್ರಕ್ಕೆ ನುಸುಳಿದಂತಿದೆ. ಈವರೆಗೆ ಸಾಹಿತ್ಯ ಕೃತಿಗಳು ಸಿನಿಮಾ ಆಗುತ್ತಿದ್ದವಷ್ಟೇ– ಈಗ ಹರಿವಿನ ದಿಕ್ಕು ಬದಲಾಗಿದೆ; ಸಿನಿಮಾ ಪ್ರಸಂಗಗಳು ಸಾಹಿತ್ಯಕ್ಷೇತ್ರದಲ್ಲಿ ಕಾಣಿಸುತ್ತಿವೆ. ನಾವು 'ಪ್ರತಿಸೂರ್ಯ'ರು ಎಂದು ಬೀಗುವ ಸಾರಸ್ವತ ಲೋಕದ ಅತಿರಥ ಮಹಾರಥರು 'ಸಾವಿನ ಆಟ'ದಲ್ಲಿ ಭಾಗಿಗಳಾಗಿದ್ದಾರೆ. ಬೆಳ್ಳಿತೆರೆ ಮಂದಿಯ ಆತ್ಮಹತ್ಯಾ ಪ್ರಯತ್ನಗಳ ಹಿಂದೆ ಅಸಹಾಯಕತೆ, ಹತಾಶೆ ಹಾಗೂ ಪ್ರಚಾರ ತಂತ್ರಗಳಿದ್ದರೆ– ಕುಹಕ, ಮತ್ಸರ ಹಾಗೂ ಕಾಲೆಳೆಯುವ ಚಪಲದ ಕಣ್ಣಾಮುಚ್ಚಾಲೆ ಬುದ್ಧಿಜೀವಿಗಳದು. ಸಿನಿಮಾದವರು ತಮ್ಮನ್ನು ತಾವು ಕೊಂದುಕೊಳ್ಳಲು ಯತ್ನಿಸಿದರೆ, ಈ ಸಹೃದಯರು ಎದುರಿನವರನ್ನು ಘಾಸಿಗೊಳಿಸಿ ಸುಖಿಸುತ್ತಿದ್ದಾರೆ.

ಒಬ್ಬ ಲೇಖಕರನ್ನು ನೋಡಿ– ಮತ್ತೊಬ್ಬರು ಬರಹಗಾರನೇ ಅಲ್ಲವೆನ್ನುತ್ತಾರೆ. ಮೂರನೆಯವರನ್ನು ಮಾತನಾಡಿಸಿ– ಮೊದಲನೆಯವರು ಎಡಬಿಡಂಗಿ ಎನ್ನುತ್ತಾರೆ. 'ಡಾಲರ್‌ಗಳನ್ನು ನೆಚ್ಚಿದ ಸಾಂಸ್ಕೃತಿಕ ಸೇವೆ ಇವರದು' ಎಂದು ಒಬ್ಬರನ್ನು ಟೀಕಿಸುವ ಮತ್ತೊಬ್ಬರು, 'ಸೇವೆ'ಯ ನೆಪದಲ್ಲೇ ವಿದೇಶಕ್ಕೆ ಹಾರುತ್ತಾರೆ. ನನಗೆ ಪ್ರಶಸ್ತಿ ತಪ್ಪಿತೆಂದು ಹಳಹಳಿಸುವ ಇನ್ನೊಬ್ಬರು, ಪ್ರಶಸ್ತಿಗೆ ಪಾತ್ರರಾದವರನ್ನೆಲ್ಲ ಉರಿಮಾತಿನಲ್ಲಿ ಅಟ್ಟಾಡಿಸುತ್ತಾರೆ.

'ನಾವು ಎಡ' ಎನ್ನುತ್ತದೊಂದು ಗುಂಪು. 'ನಾವು ಬಲ' ಎಂದು ಹಿಗ್ಗುವುದು ಮತ್ತೊಂದು ಗುಂಪು. ಎಡಬಲದ ನಡುವೆ ಮಾನವತೆಯ ಆತ್ಮವೇನಾದರೂ ಸುಳಿದೀತಾ ಎಂದು ಹುಡುಕಾಡುತ್ತ ದಿಕ್ಕುತಪ್ಪುವ ಸರದಿ ಓದುಗರದು. ಮತದಾರರನ್ನು, ಓದುಗರನ್ನು ಯಾರು ತಾನೆ ಕುಶಲ ವಿಚಾರಿಸುವರು.

ಬೀದಿಯಲ್ಲಿ ನಿಂತು ಭಾಷೆಯನ್ನು – ಅಕ್ಷರಗಳನ್ನು ಚೆಲ್ಲಾಡುತ್ತ, ಮಾತಿನಲ್ಲೇ ಸಹಲೇಖಕರನ್ನು ಮುಗಿಸುತ್ತಾ ಸುಖಿಸುವ ಈ 'ಕೇಳಿ'ಯ ನಡುವಿನಲ್ಲಿ ಕನ್ನಡ ಸಾಹಿತ್ಯದಲ್ಲೇನಾದರೂ ಹೊಸ ಪೌಷ್ಟಿಕ ಫಸಲು ರೂಪುಗೊಂಡಿದೆಯಾ ಎಂದು ನೋಡಿದರೆ–

ಹರಹರಾ... ನಮ್ಮ ಘಟಾನುಘಟಿ ಲೇಖಕರಿಗೆ ಅಂತಃಕರಣ ಶೋಧದ ಬರವಣಿಗೆಯ ಕಲೆಯೇ ಮರೆತುಹೋಗಿದೆಯಲ್ಲ! ಜಟೆಯ ಮಣಿ ಕಳೆದುಕೊಂಡ ಕ್ರುದ್ಧ ಅಶ್ವತ್ಥಾಮಂದಿರ ನೆರಳುಗಳಂತೆ ಈ ಲೇಖಕರೆಲ್ಲ ತಮ್ಮ ಲೇಖನಿಗಳನ್ನೇ ಖಡ್ಗಗಳಾಗಿ ಝಳಪಿಸುತ್ತಿರುವಾಗ ಅಕ್ಷರಗಳೆಲ್ಲ ನೆತ್ತರು ಕಾರಿಕೊಂಡು ಬೀದಿಯಲ್ಲಿ ಚೆಲ್ಲಾಪಿಲ್ಲಿಯಾಗಿರುವುದನ್ನು ನೀವು ಕಂಡಿರಾ... ನೀವು ಕಂಡಿರಾ....

**–ಮಹತಿ**

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd.,Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68